ತಾಲ್ಲೂಕು	ಸಮೀಕ್ಷಾ ಪೂರ್ವ			ಸಮೀಕ್ಷಾ ನಂತರ		
	ಸಂಧ್ಯಾ ಸುರಕ್ಷಾ	ಅಂಗವಿಕಲ ವೇತನ	ವಿಧವಾ ವೇತನ	ಸಂಧ್ಯಾ ಸುರಕ್ಷಾ	ಅಂಗವಿಕಲ ವೇತನ	ವಿಧವಾ ವೇತನ
ಹುಣಸೂರು	7112	4316	9348	7625	3374	7251
ಕೆ.ಆರ್.ನಗರ	5077	5698	10563	3759	2066	5061
ಹೆಚ್.ಡಿ.ಕೋಟೆ	11265	4153	9270	10417	3672	7845
ಪಿರಿಯಾಪಟ್ಟಣ	3360	1232	961	3839	1385	1107
ಒಟ್ಟು	**61461**	**35432**	**74133**	**56153**	**26822**	**53827**

ಇ) ಹೊಸ ಅರ್ಜಿಗಳನ್ನು ನಿಯಾಮನುಸಾರ ದಾಖಲಾತಿಗಳನ್ನು ಪರಿಶೀಲಿಸಿ ವಿಳಂಬವಿಲ್ಲದೆ ಮಂಜೂರಾತಿಗೆ ಕ್ರಮವಹಿಸಲಾಗುತ್ತಿದೆ.

ಈ) ಮೈಸೂರು ಜಿಲ್ಲೆಯಲ್ಲಿ ಈ ರೀತಿ ಸಮಸ್ಯೆಗಳು ಉದ್ಭವಿಸುತ್ತಿರುವುದಿಲ್ಲ.

ಆಸ್ಪತ್ರೆಗಳನ್ನು ಹಸ್ತಾಂತರಿಸುವ ಬಗ್ಗೆ

448

ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)

ಅ) ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳು ಯಾವುವು (ಆಸ್ಪತ್ರೆ ಹೆಸರು ಹಾಗೂ ಕಾರ್ಯ ನಿರ್ವಹಿಸುತ್ತಿರುವ ವಿಳಾಸ ನೀಡುವುದು) ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂಧಿಗಳ ಸಂಖ್ಯೆ ಎಷ್ಟು ಮಂಜೂರಾತಿಯಾದ ಹುದ್ದೆಗಳೆಷ್ಟು (ವಿವರ ನೀಡುವುದು), ಕೊರತೆ ಇದ್ದಲ್ಲಿ ಅವುಗಳನ್ನು ಭರ್ತಿಮಾಡಲು ಸರ್ಕಾರವು ಅನುಸರಿಸುತ್ತಿರುವ ಕ್ರಮವೇನು?

ಆ) ಈ ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಇ) ಬೆಳಗಾವಿ ಮಹಾನಗರ ಪಾಲಿಕೆಯ ಗೊತ್ತುವಳಿ ಸಂಖ್ಯೆ.41. ದಿನಾಂಕ:– 07/02/2006 ರ ಮೇರೆಗೆ (ಪ್ರತಿಯನ್ನು ನೀಡುವುದು) ಬೆಳಗಾವಿ ಮಹಾನಗರ ಪಾಲಿಕೆಯ ಎಲ್ಲಾ ಆಸ್ಪತ್ರೆ ಹಾಗೂ ಪ್ರಸ್ತೂತಿ ಗೃಹಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ

ಹಸ್ತಾಂತರಿಸಲು ನಿರ್ಣಯಿಸಿದ ಪ್ರಸ್ತಾವನೆಯ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಭಿಪ್ರಾಯವನ್ನು ಪಡೆಯಲು ಕಾಲಾವಕಾಶದ ಅವಶ್ಯಕತೆ ಇದೆಯೇ?

ಈ) ಸುಮಾರು 6 ವರ್ಷಗಳ ದೀರ್ಘಾವಧಿ ಗತಿಸಿದರೂ ಕೂಡಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಅಭಿಪ್ರಾಯ ನೀಡುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ವಿಳಂಬಕ್ಕೆ ಕಾರಣರಾಗಿರುವ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದೇ?

ಊ) ಈ ಇಲಾಖೆಯ ಅಭಿಪ್ರಾಯ ಪಡೆದು ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಯಾವಾಗ ಹಸ್ತಾಂತರಿಸಲಾಗುವುದು?

ಮಾನ್ಯ ಎಸ್. ಸುರೇಶ್ ಕುಮಾರ್
(ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸೂತಿ ಗೃಹಗಳು ಸೇರಿದಂತೆ ಈ ಕೆಳಗಿನ ಅಂಕಣಗಳಲ್ಲಿಯ ಆಸ್ಪತ್ರೆಯ ಹೆಸರು, ವಿಳಾಸ, ಸಿಬ್ಬಂಧಿಗಳ ಸಂಖ್ಯೆ ಮತ್ತು ಮಂಜೂರಾತಿಯಾದ ಹುದ್ದೆಗಳ ವಿವರವನ್ನು ಸಲ್ಲಿಸಲಾಗಿದೆ.

ಅ. ನಂ	ಆಸ್ಪತ್ರೆಯ ಹೆಸರು	ಕಾರ್ಯ ನಿರ್ವಹಿಸುತ್ತಿರುವ ವಿಳಾಸ
1	ಪ್ರಸೂತಿ ಗೃಹ ಮತ್ತು ಆಲೋಪಥಿಕ್ ಆಸ್ಪತ್ರೆ,	ಹೊಸೂರ, ಬಸವನಗಲ್ಲಿ.
2	ಪ್ರಸೂತಿ ಗೃಹ ಮತ್ತು ಆಲೋಪಥಿಕ್ ಆಸ್ಪತ್ರೆ,	ರಾಜಹಂಸ ಗಲ್ಲಿ, ಅನಗೋಳ
3	ಆಲೋಪಥಿಕ್ ಆಸ್ಪತ್ರೆ,	ಬಸವನ ಕುಡಚಿ ಮುಖ್ಯರಸ್ತೆ.
4	ಮಹಾನಗರ ಪಾಲಿಕೆಯ ಆಸ್ಪತ್ರೆ	ಅಲಾರವಾಡ, ಬಸ್ ಸ್ಟ್ಯಾಂಡ್ ರಸ್ತೆ.
5	ಆಲೋಪಥಿಕ್ ಆಸ್ಪತ್ರೆ,	ಕಣಬರ್ಗಿ, ಮುಖ್ಯ ಬಸ್ ಸ್ಟ್ಯಾಂಡ್ ರಸ್ತೆ.

ಅ. ಸಂ	ಆಸ್ಪತ್ರೆಯ ಹೆಸರು	ಕಾರ್ಯ ನಿರ್ವಹಿಸುತ್ತಿರುವ ವಿಳಾಸ
6	ಆಲೋಪಥಿಕ್ ಆಸ್ಪತ್ರೆ,	ಮಜಗಾಂವ, ಮುಖ್ಯ ಬಸ್ ಸ್ಟ್ಯಾಂಡ್ ರಸ್ತೆ.
7	ಆಲೋಪಥಿಕ್ ಆಸ್ಪತ್ರೆ,	ಕಚೇರಿ ಗಲ್ಲಿ, ಶಹಾಪುರ
8	ಆಯುರ್ವೇದಿಕ್ ದವಾಖಾನೆ	ತಾಶೀಲ್ದಾರಗಲ್ಲಿ
9	ಆಯುರ್ವೇದಿಕ್ ದವಾಖಾನೆ (ತೆಂಗಿನಕರ ಗಲ್ಲಿ)	ರಿಸಾಲ್ದಾರ ಗಲ್ಲಿ
10	ಆಯುರ್ವೇದಿಕ್ ದವಾಖಾನೆ	ತಿಳಕವಾಡಿ, ಕಲಾಮಂದಿರ ಹತ್ತಿರ.
11	ಆಯುರ್ವೇದಿಕ್ ದವಾಖಾನೆ	ಕಡೋಲ್ಕರ ಗಲ್ಲಿ, ಮುಖ್ಯರಸ್ತೆ.
12	ಆಯುರ್ವೇದಿಕ್ ದವಾಖಾನೆ	ಚವ್ಹಾಟ ಗಲ್ಲಿ, ಕೋರ್ಟ ರಸ್ತೆ
13	ಮಹಾನಗರ ಪಾಲಿಕೆ ಆಸ್ಪತ್ರೆ.	ಗಾಂಧಿ ನಗರ, ಮಸೀದಿ ಗಲ್ಲಿ.

ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಸಂಖ್ಯೆ ಎಷ್ಟು		ಮಂಜೂರಾತಿಯಾದ ಹುದ್ದೆಗಳೆಷ್ಟು
1. ವೈದ್ಯಾಧಿಕಾರಿ ಮತ್ತು ಮಹಿಳಾ ವೈದ್ಯಾಧಿಕಾರಿ.	01	06
2. ಆಯುರ್ವೇದಿಕ್ ವೈದ್ಯ.	04	05
3. ಎ.ಎನ್,ಎಮ್.	04	09
4. ಕಾಂಪೌಂಡರ್	08	10
5. ಕಾಂಪೌಂಡರ್ ಕಮ್ ಡ್ರೆಸ್ಸರ್.	–	02
6. ಡ್ರೆಸ್ಸರ್	03	10
7.ಆಯಾ ಮತ್ತು ದಾದಿ	06	13
8.ಅಂಬ್ಯುಲೆನ್ಸ್ ಡ್ರೈವರ್	–	01
9.ವಾಚಮನ್	02	02

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಇಲ್ಲ

ಇ) ಕಾಲಾವಕಾಶದ ಅವಶ್ಯಕತೆ ಇರುತ್ತದೆ.

ಈ) ಇಲ್ಲ

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಸರ್ಕಾರಕ್ಕೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಉಡುಪಿ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಕ್ರಮಗಳು

392 : (440)

ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ ವಿಧಾನಸಭಾ ಸದಸ್ಯರು)

ಅ) ಉಡುಪಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯವತಿಯಿಂದ ಯಾವ ಯಾವ ಕಾರ್ಯಕ್ರಮಗಲನ್ನು ಹಮ್ಮಿಕೊಳ್ಳಲಾಗಿದೆ;

ಆ) ಕಾರ್ಕಳ ತಾಲ್ಲೂಕಿನಲ್ಲಿರುವ ಕೂಡ್ಲು ತೀರ್ಥ ಮತ್ತು ಕಾರ್ಕಳ ಬಾಹುಬಲಿ ಕ್ಷೇತ್ರ ಹಾಗೂ ವರಂಗ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಕೈಗೊಳ್ಳಲಾದ ಕ್ರಮವೇನು?

ಶ್ರೀ ಆನಂದ್ ಸಿಂಗ್
(ಮಾನ್ಯ ಪ್ರವಾಸೋದ್ಯಮ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಇಲಾಖೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.

ಆ) ಕಾರ್ಕಳ ತಾಲ್ಲೂಕಿನಲ್ಲಿರುವ ಕೂಡ್ಲು ತೀರ್ಥ ಕ್ಷೇತ್ರವು ದಟ್ಟ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವುದರಿಂದ ಈ ತಾಣವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ.

ಕಾರ್ಕಳದ ಗೊಮ್ಮಟ ಬೆಟ್ಟದ ಬಳಿ ರೂ.107.70 ಲಕ್ಷಗಳ ಅಂದಾಜಿನಲ್ಲಿ ಯಾತ್ರಿನಿವಾಸ ನಿರ್ಮಿಸಿ ನಿರ್ವಹಣೆಗಾಗಿ ಜೈನ ಸಮಿತಿಯವರಿಗೆ ವಹಿಸಲಾಗಿದೆ.